# ನಾ ಡೊಂಕಾದರೆ ನಿನ್ನ ನಾಮ ಡೊಂಕೆ ವಿಠಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 315.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 70.
3. **Note:** Lyrics given without highlights are as per Ref. 1. The wordings in Ref. 2 are same as in Ref. 1 except a few which are given in yellow highlights.
4. **Note:** Singer has followed these lyrics.

ರಾಗ: ನಾದನಾಮಕ್ರಿಯೆ ತಾಳ: ಏಕ

ನಾ ಡೊಂಕಾದರೆ ನಿನ್ನ ನಾಮ ಡೊಂಕೆ ವಿಠಲ ॥ ಪ ॥

ನದಿಯು ಡೊಂಕು ಆದರೇನು ಉದಕ ಡೊಂಕೆ ವಿಠ್ಠಲ ॥ ೧ ॥
ಹಾವು ಡೊಂಕು ಆದರೇನು ವಿಷವು ಡೊಂಕೆ ವಿಠ್ಠಲ ॥ ೨ ॥ (ಕಬ್ಬು ಡೊಂಕು ಆದರೇನು ಸಿಹಿಯು ಡೊಂಕೆ ವಿಠ್ಠಲ)
ಪುಷ್ಪ ಡೊಂಕು ಆದರೇನು ಪರಿಮಳ ಡೊಂಕೆ ವಿಠಲ ॥ ೩ ॥
ಆಕಳು ಡೊಂಕು ಆದರೇನು ಹಾಲು ಡೊಂಕೆ ವಿಠ್ಠಲ ॥ ೪ ॥
ಬಿಲ್ಲು ಡೊಂಕು ಆದರೇನು ಬಾಣ ಡೊಂಕೆ ವಿಠ್ಠಲ ॥ ೫ ॥
ನಾನು ಹೊಲೆಯನಾದರೆ, ನಿನ್ನ ನಾಮ ಹೊಲೆಯೆ ವಿಠ್ಠಲ ॥ ೬ ॥
ಅಜ್ಞನೆಂದು ಕಾಯೊ ಎನ್ನ, ಸುಜ್ಞ ಪುರಂದರ ವಿಠ್ಠಲ ॥ ೭ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಜೀವ ಅಲ್ಪಾಂಶವೆ. ಆದರೆ ಜೀವರ ಸ್ವರೂಪಭೂತಗುಣವಾದ ಭಕ್ತಿ ಪರಮಾತ್ಮನನ್ನೂ ಒಳಗೊಳ್ಳುವುದರಿಂದ ಅದರ ಬಲ ಹೆಚ್ಚಿನದು. ಜೀವರಿಗೆ ಸ್ಥೂಲಾದಿ ದೇಹ ಸಂಸರ್ಗವಿರುವುದರಿಂದ ಪ್ರಾಕೃತ ಬಂಧವುಂಟು. ಕರ್ಮ ಲೇಪವುಂಟು, ಸುಖ–ದುಃಖಾದ್ಯನುಭವವುಂಟು. ಮುಕ್ತಿ ಯೋಗ್ಯರಾದ ಜೀವರಿಗೆ ಲಿಂಗದೇಹ ಭಂಗವಾದ ಮೇಲೆ ಸ್ವರೂಪ ಗುಣಗಳ ಅವಿರ್ಭಾವವಾಗುತ್ತದೆ. ನದಿಯಲ್ಲಿರುವ ನೀರಿನಂತೆ, ಕಬ್ಬಿನಲ್ಲಿರುವ ಸಿಹಿಯಂತೆ, ಹೂವಲ್ಲಿರುವ ಪರಿಮಳದಂತೆ ಜೀವರಿಗೆ ಜ್ಞಾನ, ಭಕ್ತಿ, ವಿರಕ್ತಿಗಳು. ಇಲ್ಲಿ 'ನಿನ್ನ ನಾಮ'ವೆಂದರೆ 'ನಿನ್ನ ನಾಮಸ್ಮರಣೆ'. ಜ್ಞಾನ, ಭಕ್ತಿ, ವಿರಕ್ತಿಗಳು ನಾಮ ಸ್ಮರಣೆಯ ಭೂಮಿಕೆಯಲ್ಲಿರುವುದರಿಂದ ಅದೂ ಜೀವರ ಸ್ವರೂಪವೆಂದೇ ಗ್ರಹಿಸಬಹುದು.

**Classification:** Keerthane
**Ankita:** purandara vittala

**Location:** NA

**Category:** Jeevana Sambhodane

**Sub-Category:** nadi, niru, uraga, visha, pushpa, govu, halu, billu, holeya, jnana.

**Pravachana:** NA

**Explanation:** NA